# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 170 | Pages. 2 | Date: 13-06-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 170 – ಪುಟಗಳು : 2 | 13-06-2026 ಶನಿವಾರ | Ph: 8762954248 | ದರ : ₹1


# ಪರೀಕ್ಷಾ ಅಕ್ರಮ ಖಂಡಿಸಿ ಕಾಂಗ್ರೆಸ್ ಹೋರಾಟ

## ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಗೆ ಖಂಡನೆ | ಸಂಸದರ ನೇತೃತ್ವದಲ್ಲಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮೂಲಕ ಕೇಂದ್ರ ಸರ್ಕಾರ ಲಕ್ಷಾಂತರ ವಿದ್ಯಾರ್ಥಿಗಳನ್ನು ಬೀದಿಗೆ ತಳ್ಳಿದೆ ಎಂದು ಆರೋಪಿಸಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದಿಂದ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಮೀಪದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ವೈದ್ಯಕೀಯ, ದಂತ ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶ ಪಡೆಯಲು ಪ್ರತಿವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಹಲವು ವರ್ಷ ಕಠಿಣ ಪರಿಶ್ರಮದೊಂದಿಗೆ ಸಿದ್ಧತೆ ನಡೆಸುತ್ತಾರೆ. ಆದರೆ ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವ ರೀತಿಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ಗಂಭೀರ ಆರೋಪಗಳು ಕೇಳಿ ಬಂದಿರುವುದು ದುರದೃಷ್ಟಕರ. ಇದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರಿದೆ ಎಂದರು.

ಗಂಭೀರ ಪ್ರಕರಣ ನಡೆದರೂ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಚಿವ ಧರ್ಮೇಂದ್ರ ಪ್ರಧಾನ್ ಮಾತನಾಡದೆ ಇರುವುದು ಶೋಚನೀಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲೋಪದೋಷಗಳಾದಾಗ ಪ್ರತಿಕ್ರಿಯೆ ನೀಡುವುದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದು ಪ್ರಕ್ರಿಯೆ. ಕೇಂದ್ರ ಸರ್ಕಾರ ಈ ವಿಚಾರವಾಗಿ ಗಮನ ಹರಿಸುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.



23 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನಲೆ ಬರೆದ ಪರೀಕ್ಷೆ ರದ್ದಾಗಿ ಜೂ.21ಕ್ಕೆ ಮರು ನಿಗದಿಯಾಗಿದೆ. ವಿದ್ಯಾರ್ಥಿಗಳು ಮಾನಸಿಕ ಒತ್ತಡ, ಅನಿಶ್ಚಿತತೆ ಮತ್ತು ಭವಿಷ್ಯದ ಆತಂಕ ಎದುರಿಸುವಂತಾಗಿದೆ. ಹಲವು ರೀತಿಯ ಗೊಂದಲ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ತೀವ್ರ ಸಂಕಷ್ಟಕ್ಕೆ ತಳ್ಳಿದೆ. ದೇಶದ ವಿವಿಧೆಡೆ ಮಕ್ಕಳು ಮಾನಸಿಕವಾಗಿ ಕುಗ್ಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದರು.

ರಾಷ್ಟ್ರೀಯ ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸಮಗ್ರವಾಗಿ ಪರಿಶೀಲಿಸಿ, ಭವಿಷ್ಯದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಅಥವಾ ಅಕ್ರಮಗಳು ಮರುಕಳಿಸದಂತೆ ಅತ್ಯಾಧುನಿಕ ಭದ್ರತಾ ಕ್ರಮ ಜಾರಿಗೊಳಿಸಬೇಕು. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಶೈಕ್ಷಣಿಕ ಭವಿಷ್ಯ ಗಮನದಲ್ಲಿಟ್ಟುಕೊಂಡು ಸೂಕ್ತ ಬೆಂಬಲ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ, ಪರೀಕ್ಷೆ ನಡೆಸುವ ಸಂಸ್ಥೆಗಳನ್ನು ಪುನರ್ ರಚಿಸಿ ಸಂಪೂರ್ಣ ಪಾರದರ್ಶಕ ಹಾಗೂ ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆ ರೂಪಿಸುವ ಅಗತ್ಯವಿದೆ ಎಂದು ಹೇಳಿದರು.

ಪರೀಕ್ಷಾ ವ್ಯವಸ್ಥೆಯ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಜನರಲ್ಲಿ ಅನುಮಾನ ಮೂಡಿದೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಬೇಕು. ತಪ್ಪಿತಸ್ಥ ಅಧಿಕಾರಿಗಳು, ಮಧ್ಯವರ್ತಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಿ ಇಂತಹ ಕೃತ್ಯಗಳು ಮರುಕಳಿಸದಂತೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

> ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಮತ್ತು ಶಿಕ್ಷಣ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ನಂಬಿಕೆ ಉಳಿಸಿಕೊಳ್ಳುವ ದೃಷ್ಟಿಯಿಂದ ಕೇಂದ್ರ ಸರ್ಕಾರ ತ್ವರಿತ ಹಾಗೂ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಹಗರಣದ ಸತ್ಯಾಸತ್ಯತೆ ಬಹಿರಂಗಪಡಿಸಬೇಕು.
>
> **– ಶ್ರೇಯಸ್ ಪಟೇಲ್, ಸಂಸದ**

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್, ಮುಖಂಡರಾದ ದೇವರಾಜೇಗೌಡ, ತಾರಾ ಚಂದನ್, ರಘು ದಾಸರ ಕೊಪ್ಪಲು, ರಾಮಚಂದ್ರ, ಇಸ್ಮಾಯಿಲ್ ಮತ್ತಿತರರಿದ್ದರು.

## ರಸಗೊಬ್ಬರ ಕೊರತೆ ಖಂಡಿಸಿ ರೈತ ಸಂಘ ಪ್ರತಿಭಟನೆ



ಜಿಲ್ಲೆಯಲ್ಲಿ ಯೂರಿಯಾ ಹಾಗೂ ರಾಸಾಯನಿಕ ಗೊಬ್ಬರದ ಕೊರತೆ, ಬಿತ್ತನೆ ಬೀಜಗಳ ಅಭಾವ, ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದಿರುವುದು ಸೇರಿದಂತೆ ರೈತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಮಾತನಾಡಿ, ರಾಜ್ಯದಲ್ಲಿ ಗೊಬ್ಬರದ ಬೆಲೆ ನಿರಂತರ ಏರಿಕೆಯಾಗುತ್ತಿದ್ದು, ಹಿಂದೆ ಸುಮಾರು 1,300ಕ್ಕೆ ದೊರೆಯುತ್ತಿದ್ದ ಗೊಬ್ಬರದ ಚೀಲ ಈಗ 2,200ಕ್ಕೆ ತಲುಪಿದೆ ಎಂದು ಆರೋಪಿಸಿದರು. ಒಂದು ಎಕರೆ ಕೃಷಿ ಭೂಮಿಗೆ ನಾಲ್ಕು ಚೀಲ ಗೊಬ್ಬರ ಅಗತ್ಯವಿದ್ದರೂ ಸರ್ಕಾರ ಕೇವಲ ಒಂದು ಚೀಲ ಮಾತ್ರ ವಿತರಿಸುತ್ತಿದೆ. ಇದರಿಂದ ರೈತರು ಅಗತ್ಯ ಪ್ರಮಾಣದ ಗೊಬ್ಬರವಿಲ್ಲದೆ ಬೆಳೆ ಬೆಳೆಯಲು ಪರದಾಡುವಂತಾಗಿದೆ ಎಂದು ದೂರಿದರು. ಮಳೆಗಾಲ ಆರಂಭವಾಗಿ ಬಿತ್ತನೆ ಚಟುವಟಿಕೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಯೂರಿಯಾ ಮತ್ತು ಗೊಬ್ಬರ ಲಭ್ಯವಾಗದಿದ್ದರೆ ಕೃಷಿ ಕಾರ್ಯ ಸಂಪೂರ್ಣ ಅಸ್ತವ್ಯಸ್ತವಾಗಲಿದೆ. ಹೆಚ್ಚಿನ ಹಣ ನೀಡಿ ಖರೀದಿಸಲು ಮುಂದಾದರೂ ಗೊಬ್ಬರ ಸಿಗದ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಣ್ಣ ಮತ್ತು ಅತಿಸಣ್ಣ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆನೆಕೆರೆ ರವಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಯರಾಂ, ಜಯಣ್ಣ, ಶಿವರಾಮೇಗೌಡ, ಕಮಲಮ್ಮ, ಪವಿತ್ರ, ಕಾಳಕ್ಕ ಇತರರು ಉಪಸ್ಥಿತರಿದ್ದರು.

## ಮಂಜೇಶ್ ಕೊಲೆ: ಎ1 ಆರೋಪಿಗಾಗಿ ಕಾರ್ಯಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಎದುರು ಭಾನುವಾರ ರಾತ್ರಿ ರೌಡಿಶೀಟರ್ ಮಂಜೇಶ್‌ನ ಕೊಲೆ ಪ್ರಕರಣ ಸಂಬಂಧ ಈ ವರೆಗೆ 10 ಜನರನ್ನು ಬಂಧಿಸಿದ್ದು ಪ್ರಮುಖ ಆರೋಪಿಗಾಗಿ ಕಾರ್ಯಾಚರಣೆ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಆರೋಪಿಗಳು ಬೇಲೂರಿನ ಚನ್ನಕೇಶವ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಐವರನ್ನು ಬಂಧಿಸಿದ ತಕ್ಷಣವೇ ಉಳಿದ ಐವರು ಸ್ವಯಂ ವಿಡಿಯೋ ಮೂಲಕ ಶರಣಾಗತಿಯ ಸಂದೇಶ ರವಾನಿಸಿದ್ದರು.

ಮುಂದಿನ 12 ದಿನಗಳ ವರೆಗೆ ವಿಚಾರಣೆ ನಡೆಸಲು ಸಮಯಾವಕಾಶವಿದ್ದು ಇನ್ನಷ್ಟು ಮಾಹಿತಿ ಹಾಗು ಪ್ರಮುಖ ಆರೋಪಿಯ ಬಗ್ಗೆ ತಿಳಿದುಬರುವ ಸಾಧ್ಯತೆಯಿದೆ ಎಂದರು.

ಲಾಡ್ಜ್‌ನಲ್ಲಿ ತಂಗಿದ್ದ ಮೈಸೂರಿನ ಆಕಾಶ್, ರಾಕೇಶ್, ಜಯಂತ್, ಆದಿತ್ಯ ಹಾಗೂ ಬೆಂಗಳೂರಿನ ವಿಕಾಸ್ ಎಂಬುವವರನ್ನು ಬಂಧಿಸಲಾಯಿತು. ಇನ್ನು ತುಮಕೂರಿನ ಪುನೀತ್‌ಕುಮಾರ್, ಮಂಡ್ಯದ ಶಶಿಧರ್, ಬೆಂಗಳೂರಿನ ಭರತ್, ಸಾಯಿಕುಮಾರ್ ಹಾಗೂ ಯಲ್ಲಾಲಿಂಗ ಅವರೇ ಶರಣಾಗಿದ್ದಾರೆ. ಬಂಧಿತರಿಗೂ ಮೃತ ಮಂಜೇಶ್‌ಗೂ ಯಾವ ರೀತಿಯ ಸಂಬಂಧವಿತ್ತು ಎಂಬುದರ ಕುರಿತು ತನಿಖೆ ನಡೆಯುತ್ತಿದೆ ಎಂದರು.

ಬಂಧಿತ ಪುನೀತ್ ವಿರುದ್ಧ ಮೈಸೂರು ಹಾಗೂ ಬೆಂಗಳೂರಿನಲ್ಲಿ ಕೊಲೆ ಮತ್ತು ಜೆಪಿ ನಗರ ಠಾಣೆಯಲ್ಲಿ ಕೊಲೆ ಪ್ರಯತ್ನ ಸೇರಿ 4 ಪ್ರಕರಣಗಳಿವೆ. ವಿಕಾಸ್ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಡಕಾಯಿತಿ ಪ್ರಕರಣ ದಾಖಲಾಗಿದೆ. ಜಯಂತ್ ವಿರುದ್ಧ ಮೈಸೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳೆಲ್ಲರೂ ಅಪರಾಧ ಹಿನ್ನಲೆಯುಳ್ಳವರಾಗಿದ್ದಾರೆ ಎಂದರು.

## ಹಾಸನದಲ್ಲಿ ಜೂ. 25 ರಿಂದ ಯೋಗ ತರಬೇತಿ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಕ್ಕಳಲ್ಲಿ ನೆನಪಿನ ಶಕ್ತಿ, ಏಕಾಗ್ರತೆ, ಮೊಬೈಲ್ ಬಳಕೆ ಕಡಿಮೆ ಮಾಡುವುದು ಸೇರಿ ಸೃಜನಶೀಲತೆ ಹಾಗೂ ಆತ್ಮವಿಶ್ವಾಸ ವೃದ್ಧಿಸುವ ಉದ್ದೇಶದಿಂದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ಮಕ್ಕಳಿಗಾಗಿ ಪ್ರಜ್ಞಾ ಯೋಗ ತರಬೇತಿ ಶಿಬಿರವನ್ನು ಜೂ.25 ರಿಂದ 28ರ ವರೆಗೆ ನಗರದ ಮಹಾರಾಜ ಪಾರ್ಕ್‌ನ ಯೋಗ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಶಿಕ್ಷಕ ಜಿ.ಎ. ಸುಬ್ಬುಕೃಷ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಶಿಬಿರವು ನಾಲ್ಕು ದಿನಗಳ ಕಾಲ ವಿವಿಧ ಅವಧಿಗಳಲ್ಲಿ ನಡೆಯಲಿದ್ದು, ಜೂ. 25ರ ಬೆಳಿಗ್ಗೆ 6 ರಿಂದ 9 ಗಂಟೆ, ಜೂ. 26 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2, ಜೂ. 27 ರಂದು ಸಂಜೆ 4ರಿಂದ ರಾತ್ರಿ 8 ಗಂಟೆ ವರೆಗೆ ಹಾಗೂ ಜೂ. 28ರ ಕಡೆಯ ದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ನಡೆಯಲಿದೆ. ಶಿಬಿರದ ನಂತರ ಜೂ. 29 ರಿಂದ ಜುಲೈ 4ರ ವರೆಗೆ ಆನ್‌ಲೈನ್ ಮೂಲಕ ಮುಂದುವರಿದ ಪಠ್ಯಕ್ರಮ, ತರಬೇತಿ ಹಾಗು ಮಾರ್ಗದರ್ಶನ ನೀಡಲಾಗುವುದು ಎಂದರು.

ಬೆಂಗಳೂರು ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದ ಪೂರ್ಣಾವಧಿ ಶಿಕ್ಷಕ ಜಿ.ಚನ್ನವೀರ ಮಾತನಾಡಿ, ದೇಶಾದ್ಯಂತ ಮೂರು ಲಕ್ಷಕ್ಕೂ ಅಧಿಕ ಮಕ್ಕಳು ಶಿಬಿರದ ಪ್ರಯೋಜನ ಪಡೆದಿದ್ದಾರೆ ಎಂದು ಹೇಳಿದರು.

ಮಕ್ಕಳಲ್ಲಿ ಜ್ಞಾಪಕಶಕ್ತಿ, ಏಕಾಗ್ರತೆ, ಸೃಜನಶೀಲತೆ, ಆತ್ಮವಿಶ್ವಾಸ ಹಾಗು ವಿದ್ಯಾಭ್ಯಾಸದ ಮೇಲಿನ ಆಸಕ್ತಿ ಹೆಚ್ಚಾಗಿರುವುದು ಕಂಡುಬಂದಿದೆ. ಮಕ್ಕಳ ಅಂತಃಪ್ರಜ್ಞೆ ಜಾಗೃತಗೊಳ್ಳುವ ಮೂಲಕ ಕಣ್ಣು ಮುಚ್ಚಿ ಚಿತ್ರ ಬಿಡಿಸುವುದು, ಬಣ್ಣಗಳನ್ನು ಗುರುತಿಸುವುದು ಸೇರಿ ವಿವಿಧ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯ ಬೆಳೆಸುವ ತರಬೇತಿ ನೀಡಲಾಗುವುದೆಂದು ವಿವರಿಸಿದರು.

ನಗರಸಭೆ ನಿವೃತ್ತ ಆಯುಕ್ತ ಸಿ.ಆರ್ .ಪರಮೇಶ್ವರಪ್ಪ ಮಾತನಾಡಿ, ಸುದರ್ಶನ ಕ್ರಿಯೆಯ ನಿಯಮಿತ ಅಭ್ಯಾಸದಿಂದ ಆರೋಗ್ಯ ಮತ್ತು ಜೀವನದಲ್ಲಿ ಉಂಟಾದ ಸಕಾರಾತ್ಮಕ ಬದಲಾವಣೆಗಳ ಕುರಿತು ಅನುಭವ ಹಂಚಿಕೊಂಡರು.

ಶಿಬಿರದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಮೊ.ಸಂ. 9110256623, 9845173779 ಇಲ್ಲಿಗೆ ಕರೆ ಮಾಡಿ ಹೆಸರು ನೋಂದಾಯಿಸಬಹುದು. ಸುದ್ದಿಗೋಷ್ಠಿಯಲ್ಲಿ ಹೆಚ್.ವಿದ್ಯಾ ಇದ್ದರು.

## ಜಿಲ್ಲಾ ಪ್ಲಾಂಟರ್ಸ್ ಸಂಘದಿಂದ ಪುನಶ್ಚೇತನ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಇಲ್ಲಿನ ಬಾಳೆಗದ್ದೆಯಲ್ಲಿರುವ ಜಿಲ್ಲಾ ಪ್ಲಾಂಟರ್ಸ್ ಅಸೋಷಿಯೇಷನ್ ಸಭಾಂಗಣದಲ್ಲಿ ಶುಕ್ರವಾರ ಕಾಫಿ ಬೆಳೆಗಾರರಿಗಾಗಿ ಸುಸ್ಥಿರ ಮತ್ತು ಪುನಶ್ಚೇತನ ಕೃಷಿ ಪದ್ಧತಿ ಉತ್ತೇಜಿಸುವ ನಿಟ್ಟಿನಲ್ಲಿ ಪ್ರಾತ್ಯಕ್ಷಿಕೆ, ತರಬೇತಿ ಹಾಗೂ ಕೃಷಿ ಪರಿಕರ ವಿತರಣೆ ಕಾರ್ಯಕ್ರಮ ನೆರವೇರಿತು.

ಎಸ್‌ಎಸ್‌ಆರ್‌ಡಿಪಿ ಸಂಸ್ಥೆ ವ್ಯವಸ್ಥಾಪಕ ಗಿರೀಶ್ ಮಾತನಾಡಿ, ಮಣ್ಣಿನ ಆರೋಗ್ಯ, ನೀರಿನ ಸಂರಕ್ಷಣೆ, ಜೀವ ವೈವಿಧ್ಯ, ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆ ಹಾಗೂ ರೈತರ ಜೀವನೋಪಾಯ ಸುಧಾರಣೆಯು ಪುನಶ್ಚೇತನ ಕೃಷಿಯ ಐದು ಪ್ರಮುಖ ಸ್ತಂಭಗಳಾಗಿವೆ ಎಂದರು.

ಸಕಲೇಶಪುರ ಕಾಫಿ ಮಂಡಳಿ ಹಿರಿಯ ಸಂಪರ್ಕಾಧಿಕಾರಿ ಡಾ. ರಂಜಿತ್ ಅವರು, ಮಣ್ಣಿನ ಪರೀಕ್ಷೆಯ ಮಹತ್ವ, ಜೈವಿಕ ಗೊಬ್ಬರ ಬಳಕೆ ಹಾಗೂ ಕಾಫಿ ರೋಗಗಳ ಸಾವಯವ ನಿಯಂತ್ರಣದ ಬಗ್ಗೆ ವಿವರಿಸಿದರು.



### ಉಚಿತ ಕೃಷಿ ಪರಿಕರ ವಿತರಣೆ

ರೈತರಿಗೆ ಹುರುಳಿ ಬೀಜ, ಕಾಂಪೋಸ್ಟ್ ಕಲ್ಚರ್, ಲಿಕ್ವಿಡ್ ನೈಟ್ರೋಜನ್ (ದ್ರವ ಸಾರಜನಕ), ಕಾಫಿ ಸ್ಪೆಷಲ್ ಸೂಕ್ಷ್ಮ ಪೋಷಕಾಂಶ, ಶಾಟ್ ಹೋಲ್ ಬೋರರ್ ನಿರ್ವಹಣಾ ಟ್ರ್ಯಾಪ್‌ಗಳು ವೈಟ್ ಸ್ಟೆಮ್ ಬೋರರ್ ನಿಯಂತ್ರಣದ ಸ್ಟಿಕ್ಕಿ ಟ್ರ್ಯಾಪ್‌ಗಳನ್ನು ವಿತರಿಸಲಾಯಿತು.

ಎಸ್‌ಎಸ್‌ಆರ್‌ಡಿಪಿ ಸಂಸ್ಥೆಯ ಅಶೋಕ್, ಗಿರೀಶ್, ದಿವ್ಯ, ಕೃಷ್ಣಮೂರ್ತಿ, ಹೆಚ್‌ಯುಎಲ್, ಜೆಡಿಇ ಹಾಗೂ ಐಹೆಎಚ್ ಅಧಿಕಾರಿಗಳು ಹಾಜರಿದ್ದರು.

ಕ್ಷೇತ್ರಾಧಿಕಾರಿ ಕುಮಾರ್ ಅವರು, ಕಾಳುಮೆಣಸು ಬೆಳೆಯಲ್ಲಿ ರೋಗ ಮತ್ತು ಕೀಟ ನಿರ್ವಹಣೆ ಕುರಿತು ಮಾರ್ಗದರ್ಶನ ನೀಡಿದರು. ಮಲ್ಟಿಪ್ಲೆಕ್ಸ್ ಕಂಪನಿಯ ಹಿರಿಯ ಮಾರಾಟ ಪ್ರತಿನಿಧಿ ನಂದನ್, ಕಾಫಿ ಬೆಳೆಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಮತ್ತು ದ್ರವ ಸಾರಜನಕದ ಬಳಕೆಯ ವಿಧಾನಗಳನ್ನು ತಿಳಿಸಿದರು.

ಎಸ್‌ಎಸ್‌ಆರ್‌ಡಿಪಿ ಸಂಸ್ಥೆಯ ಯೋಜನಾ ನಿರ್ದೇಶಕ ಅಶೋಕ್ ಮಾತನಾಡಿ, ರೈತರು ಗುಣಮಟ್ಟದ ಕಾಫಿ ಉತ್ಪಾದಿಸಿ ಬ್ರ್ಯಾಂಡ್ ಮಾಡುವ ಮೂಲಕ ಮಾರುಕಟ್ಟೆ ಹಾಗೂ ಹೆಚ್ಚಿನ ಆದಾಯ ಗಳಿಸಬಹುದು. ಇಂಗಾಲ ಹೊರಸೂಸುವಿಕೆ ಕಡಿಮೆ ಮಾಡುವ ಈ ಕೃಷಿ ಪದ್ಧತಿಯಿಂದ, ಮುಂದಿನ ದಿನಗಳಲ್ಲಿ ಟಕಾರ್ಬನ್ ಕ್ರೆಡಿಟ್‌ಟಿ ಅವಕಾಶಗಳ ಮೂಲಕ ರೈತರಿಗೆ ಹೆಚ್ಚುವರಿ ಆದಾಯ ಒದಗಿಸಲು ಸಹಕರಿಸಲಾಗುವುದೆಂದು ಭರವಸೆ ನೀಡಿದರು.

ರೈತರಾದ ವೈ.ಸಿ.ರುದ್ರಪ್ಪ, ಚನ್ನಕೇಶವ, ಮಂಗಳ ಹಾಗೂ ತೀರ್ಥ ಅವರು, ಪುನಶ್ಚೇತನ ಕೃಷಿ ಅಳವಡಿಸಿಕೊಂಡ ನಂತರ ಮಣ್ಣಿನ ಆರೋಗ್ಯ ಮತ್ತು ಇಳುವರಿಯಲ್ಲಿ ಆದ ಧನಾತ್ಮಕ ಸುಧಾರಣೆಗಳ ಕುರಿತು ಅನುಭವ ಹಂಚಿಕೊಂಡರು.

## ದೊಡ್ಡಮಗ್ಗೆಯಲ್ಲಿ ವಲಸೆ ಕಾರ್ಮಿಕರಿಗೆ ಆರೋಗ್ಯ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ದೊಡ್ಡಮಗ್ಗೆ ಗ್ರಾಮದ ಮಗ್ಗೆ ತೋಟದಲ್ಲಿ ವಲಸೆ ಕಾರ್ಮಿಕರಿಗೆ ಆರೋಗ್ಯ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಆರೋಗ್ಯ ಇಲಾಖೆ ವತಿಯಿಂದ ನಡೆದ ಶಿಬಿರದಲ್ಲಿ ಹೊರ ರಾಜ್ಯದ ಕೇರಳ, ಬಿಹಾರ, ಉತ್ತರ ಪ್ರದೇಶ ಮುಂತಾದ ಕಡೆಯಿಂದ ವಲಸೆ ಬಂದಿದ್ದ ಕಾರ್ಮಿಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಆರೋಗ್ಯ ತಪಾಸಣೆ ಮತ್ತು ಅರಿವು ಕಾರ್ಯಕ್ರಮ ಕೈಗೊಳ್ಳಲಾಯಿತು. ಶಿಬಿರದಲ್ಲಿ ಸುಮಾರು 50ಕ್ಕಿಂತ ಹೆಚ್ಚು ಕಾರ್ಮಿಕರಿಗೆ ಹೆಚ್‌ಐವಿ ಸಿಫಿಲಿಸ್, ಹೆಚ್‌ಬಿಎಸ್‌ಎಜಿ, ಮಧುಮೇಹ ಹಾಗೂ ಅಧಿಕ ರಕ್ತದ ಒತ್ತಡ ಮುಂತಾದ ಖಾಯಿಲೆಗಳ ಕುರಿತು ಮಾಹಿತಿ ಒದಗಿಸಿ ತಪಾಸಣೆ ಮಾಡಲಾಯಿತು.

ಸರ್ಕಾರಿ ಆಸ್ಪತ್ರೆಯ ಐಸಿಟಿಸಿ ವಿಭಾಗದ ಆಪ್ತ ಸಮಾಲೋಚಕ ಪ'ರ'ಶ'ುರಾವ'ು ಶಿರ'ೂರ', ಪ್ರಯೋಗಶಾಲಾ ತಂತ್ರಜ್ಞೆ ಗೌರಮ್ಮ, ಎನ್‌ಸಿಡಿ ವಿಭಾಗದ ಡಾ. ಪ್ರೀತಮ್, ಆಪ್ತ ಸಮಾಲೋಚಕ ಉಮೇಶ್, ಶುಶ್ರೂಷಕ ಅಧಿಕಾರಿ ಲಲಿತ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಪರಮೇಶ್, ಪ್ರಯೋಗಶಾಲಾ ತಂತ್ರಜ್ಞಾನದ ಶೋಭಾ, ಜಯಪ್ರಕಾಶ್, ನಾರಾಯಣ್, ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಪ್ರಕಾಶ್, ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು ಭಾಗಿಯಾದರು.

## ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಶಾಸಕ ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ಆದ್ಯತೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ಬಲವರ್ಧನೆಗೆ ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ವಿವಿಧ ಗ್ರಾಮೀಣ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ರಸ್ತೆ ಅಭಿವೃದ್ಧಿ ಎಂದರೆ ಕೇವಲ ಸಂಚಾರ ವ್ಯವಸ್ಥೆಯ ಸುಧಾರಣೆ ಮಾತ್ರವಲ್ಲ. ಗ್ರಾಮಗಳ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ಅಡಿಪಾಯವಾಗುತ್ತದೆ ಎಂದು ತಿಳಿಸಿದರು.



ಗ್ರಾಮೀಣ ಭಾಗದ ಜನರು ಹಲವು ವರ್ಷಗಳಿಂದ ಉತ್ತಮ ರಸ್ತೆ ಸಂಪರ್ಕಕ್ಕಾಗಿ ನಿರೀಕ್ಷೆ ಇಟ್ಟುಕೊಂಡಿದ್ದು, ಜನರ ಬೇಡಿಕೆ ಮತ್ತು ಸ್ಥಳೀಯ ಅಗತ್ಯಗಳನ್ನು ಪರಿಗಣಿಸಿ ಹಂತ ಹಂತವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಉತ್ತಮ ರಸ್ತೆ ವ್ಯವಸ್ಥೆಯಿಂದ ರೈತರಿಗೆ ಕೃಷಿ ಉತ್ಪನ್ನಗಳ ಸಾಗಾಣಿಕೆ ಸುಗಮವಾಗಲಿದ್ದು, ವಿದ್ಯಾರ್ಥಿಗಳಿಗೆ ಶಿಕ್ಷಣ ಹಾಗೂ ಸಾರ್ವಜನಿಕರಿಗೆ ಆರೋಗ್ಯ ಸೇವೆಗಳು ಸೇರಿದಂತೆ ಅಗತ್ಯ ಸೌಲಭ್ಯಗಳು ವೇಗವಾಗಿ ತಲುಪಲಿವೆ.

ಕ್ಷೇತ್ರದ ಪ್ರತಿಯೊಂದು ಭಾಗಕ್ಕೂ ಸಮಾನ ಅಭಿವೃದ್ಧಿ ತಲುಪಿಸುವ ಉದ್ದೇಶದಿಂದ ಯಾವುದೇ ರಾಜಕೀಯ ಭೇದವಿಲ್ಲದೆ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಜನರು ತಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ತಕ್ಕಂತೆ ಕ್ಷೇತ್ರದ ಅಭಿವೃದ್ಧಿಗೆ ಬದ್ಧತೆಯಿಂದ ಕೆಲಸ ಮಾಡಲಾಗುತ್ತಿದ್ದು, ಕೈಗೆತ್ತಿಕೊಳ್ಳಲಾದ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ವಿಶೇಷ ಒತ್ತು ನೀಡಲಾಗಿದೆ ಎಂದು ತಿಳಿಸಿದರು.

ಹೊಸೂರು ಗ್ರಾಮದ ವ್ಯಾಪ್ತಿಯಲ್ಲಿ 10 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, ಬ್ಯಾಬ ಗ್ರಾಮದ ವ್ಯಾಪ್ತಿಯಲ್ಲಿ 5 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, 5 ಲಕ್ಷ ರೂ. ವೆಚ್ಚದ ದೊಡ್ಡಕೆರೆ ಕೋಡಿ ದುರಸ್ತಿ ಕಾಮಗಾರಿ ಹಾಗೂ ಧರ್ಮಪುರಿ ಗ್ರಾಮದ ಮುಖ್ಯ ರಸ್ತೆಯ 20 ಲಕ್ಷ ರೂ. ವೆಚ್ಚದ ಮರು ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

# ಮೂರು ತಿಂಗಳ 29 ಕೋಟಿ ರೂ. ಯುವ ನಿಧಿ ಬಿಡುಗಡೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಾಲ್ಕು ತಿಂಗಳಿಂದ ಯುವ ನಿಧಿ ಹಣ ಪಾವತಿಯಾಗದೆ ಆತಂಕಕ್ಕೆ ಸಿಲುಕಿದ್ದ ಅರ್ಜಿದಾರರಿಗೆ ಮೂರು ತಿಂಗಳ ಹಣ ಏಕಕಾಲಕ್ಕೆ ಪಾವತಿಯಾಗಿರುವುದು ಸಂತಸ ತಂದಿದೆ.

ಜನವರಿ ತಿಂಗಳ ಹಣ ಪಡೆದಿದ್ದ ಉದ್ಯೋಗಾಕಾಂಕ್ಷಿಗಳು ಕಳೆದ ನಾಲ್ಕು ತಿಂಗಳಿಂದ ಹಣ ಬಾರದೆ ಯೋಜನೆ ಶಾಶ್ವತವಾಗಿ ಸ್ಥಗಿತಗೊಳ್ಳುವ ಆತಂಕದಲ್ಲಿದ್ದರು. ಆದರೆ ಜೂನ್ 9 ಹಾಗೂ 10ರಂದು ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಿದೆ. ಒಟ್ಟು 29.45.85.000 ರೂ. ಬಿಡುಗಡೆಯಾಗಿದೆ. ಫೆಬ್ರವರಿಯಲ್ಲಿ 4820, ಮಾರ್ಚ್ 4440 ಹಾಗು ಏಪ್ರಿಲ್‌ನಲ್ಲಿ 3355 ಫಲಾನುಭವಿಗಳು ಹಣ ಪಡೆದಿದ್ದಾರೆ.

### 10,837 ಅರ್ಜಿ ಸಲ್ಲಿಕೆ

ಪದವಿ ಅಥವಾ ಡಿಪ್ಲೊಮಾ ವ್ಯಾಸಂಗ ಪೂರ್ಣಗೊಳಿಸಿದವರಿಗೆ ಉದ್ಯೋಗ ಸಿಗುವ ವರೆಗೆ ಅಥವಾ ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗಾಗಿ ಎರಡು ವರ್ಷಗಳ ಕಾಲ ಸರ್ಕಾರ ಯುವನಿಧಿ ಹೆಸರಿನಡಿ ಹಣ ನೀಡಲಾಗುತ್ತಿದೆ. ಪದವೀಧರರಿಗೆ 3 ಸಾವಿರ ರೂ. ಹಾಗೂ ಡಿಪ್ಲೊಮಾ, ಐಟಿಐ ಪಾಸಾದವರಿಗೆ ಪ್ರತಿ ತಿಂಗಳು 1,500 ರೂ. ದೊರೆಯುತ್ತಿದೆ. 2022-23ನೇ ಸಾಲಿನಲ್ಲಿ ವ್ಯಾಸಂಗ ಮಾಡಿ ಪದವಿ ಪೂರ್ಣಗೊಳಿಸಿದವರು ಯೋಜನೆಗೆ ಅರ್ಹರಾಗಿದ್ದರು. ಯೋಜನೆ ಆರಂಭದಲ್ಲಿ ಅರ್ಜಿ ಸಲ್ಲಿಸಿ ಫಲಾನುಭವಿಗಳಾಗಿದ್ದವರು ಸವಲತ್ತು ಪಡೆಯಲು ಶುರುವಾಗಿ ಎರಡು ವರ್ಷ ಪೂರ್ಣಗೊಂಡಿದ್ದು ಅಂತವರಿಗೆ ಯುವ ನಿಧಿ ಹಣ ದೊರೆಯುತ್ತಿಲ್ಲ. ಉಳಿದಂತೆ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ ಅಂತಿಮಗೊಳಿಸಲಾಗುತ್ತಿದೆ. ಸದ್ಯ ಈ ಯೋಜನೆಯ ಲಾಭ ಪಡೆಯಲು ಜಿಲ್ಲೆಯ 10,837 ಜನರು ಅರ್ಜಿ ಸಲ್ಲಿಸಿದ್ದಾರೆ. ಆದರೆ ಫಲಾನುಭವಿಗಳ ಸಂಖ್ಯೆ 3 ರಿಂದ 4 ಸಾವಿರ ಮಾತ್ರ ಇರುತ್ತದೆ. ಉಳಿದ ಅರ್ಜಿಗಳ ಪರಿಶೀಲನೆಯಾದ ಬಳಿಕ ಸ್ವೀಕೃತ ಅಥವಾ ತಿರಸ್ಕೃತವಾಗುತ್ತವೆ. ಯುವ ನಿಧಿಗೆ ಅರ್ಹತೆ ಪಡೆಯಬೇಕೆಂದರೆ ವ್ಯಾಸಂಗ ಮುಗಿದು 180 ದಿನಗಳಾಗಿರಬೇಕು, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ, ಬ್ಯಾಂಕ್ ಪಾಸ್ ಬುಕ್, ವಾಸಸ್ಥಳ ದೃಢೀಕರಣ ಪತ್ರ ಇರಬೇಕು. ಅರ್ಜಿದಾರರು ಉನ್ನತ ವ್ಯಾಸಂಗ ಮಾಡಬಾರದು ಹಾಗು ಉದ್ಯೋಗಿಯೂ ಆಗಿರಬಾರದು. ಆದರೆ ಎಲ್ಲರೂ ಅರ್ಜಿ ಸಲ್ಲಿಸುವುದರಿಂದ ಅವುಗಳ ಸೂಕ್ಷ್ಮ ಪರಿಶೀಲನೆ ನಡೆಸಿ ಅರ್ಹರ ಆಯ್ಕೆ ಮಾಡಲಾಗುತ್ತದೆ. ಹೀಗಾಗಿ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

### ಪ್ರತಿ ತಿಂಗಳು ಬಿಡುಗಡೆಯಾಗಲಿ

ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಯುವ ನಿಧಿಯ ಲಾಭ ದೊರೆಯುತ್ತದೆಂಬ ಆಸೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಕೈಗೊಂಡಿದ್ದಾರೆ. ಬಡತನ ಕಾರಣದಿಂದ ಕೆಲವರು ವ್ಯಾಸಂಗಕ್ಕಾಗಿ ಮನೆಯಲ್ಲಿ ಹಣ ಕೇಳದೆ ಯುವ ನಿಧಿಯನ್ನೇ ನಂಬಿಕೊಂಡಿದ್ದಾರೆ. ಹಳ್ಳಿಗಳಿಂದ ನಿತ್ಯ ನಗರ ಕೇಂದ್ರದ ಗ್ರಂಥಾಲಯಗಳಿಗೆ ಓದುವುದಕ್ಕಾಗಿಯೇ ಬರುತ್ತಾರೆ. ಪುಸ್ತಕ ಮತ್ತಿತರ ಸಾಮಾಗ್ರಿ ಖರೀದಿಗೆ ಯೋಜನೆಯ ಹಣವೇ ಆಧಾರವಾಗಿರುತ್ತದೆ. ಆದ್ದರಿಂದ ಸರ್ಕಾರ ಹಣವನ್ನು ಬಾಕಿ ಉಳಿಸಿಕೊಳ್ಳದೆ ಪ್ರತಿ ತಿಂಗಳು ಬಿಡುಗಡೆ ಮಾಡಬೇಕೆಂಬ ಆಗ್ರಹ ಕೇಳಿಬಂದಿದೆ.

> 2026ರ ಜನವರಿ 24 ರಿಂದ ಏಪ್ರಿಲ್ 26ರ ವರೆಗೆ 98,934 ಫಲಾನುಭವಿಗಳಿಗೆ 29 ಕೋಟಿ ರೂ. ಹಣ ಸಂದಾಯವಾಗಿದೆ. ಈಗಷ್ಟೇ ಪದವಿ, ಡಿಪ್ಲೊಮಾ ವ್ಯಾಸಂಗ ಮುಗಿಸಿದವರು ಅರ್ಜಿ ಸಲ್ಲಿಸಬಹುದು. ಹಣ ಬಿಡುಗಡೆ ಪ್ರಕ್ರಿಯೆಯಲ್ಲಿ ಯಾವ ಸಮಸ್ಯೆಯಿಲ್ಲ.
>
> **– ವಿಜಯಲಕ್ಷ್ಮಿ, ಜಿಲ್ಲಾ ಉದ್ಯೋಗಾಧಿಕಾರಿ**

### ಸ್ವಯಂ ದೃಢೀಕರಣ ಕಡ್ಡಾಯ

ಯುವ ನಿಧಿ ಫಲಾನುಭವಿಗಳು ಸೇವಾ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದರೆ ಪ್ರಕ್ರಿಯೆ ಮುಗಿಯುವುದಿಲ್ಲ. ಒಂದು ತಿಂಗಳ ಹಣ ಬಂದ ಬಳಿಕ ಮುಂದಿನ ತಿಂಗಳು ಯೋಜನೆಗೆ ಆಯ್ಕೆಯಾಗಬೇಕೆಂದರೆ ಆ ತಿಂಗಳ 12 ರಿಂದ 25ನೇ ದಿನಾಂಕದ ಒಳಗೆ ತಾನು ಯಾವುದೇ ಉದ್ಯೋಗ ಮಾಡುತ್ತಿಲ್ಲವೆಂದು ಸ್ವಯಂ ದೃಢೀಕರಣ ಸಲ್ಲಿಸಬೇಕು. ನಿರ್ಲಕ್ಷ್ಯ ವಹಿಸಿದರೆ ಯೋಜನೆಯಿಂದ ಶಾಶ್ವತವಾಗಿ ಹೊರಗುಳಿಯಬೇಕಾಗುತ್ತದೆ.

# ವಿದ್ಯುತ್ ನಿಗಮ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಟಾಟಾ ಪವರ್ ಕಂಪನಿಗೆ ವಿದ್ಯುತ್ ಸರಬರಾಜು ಪರವಾನಗಿ ನೀಡುವುದನ್ನು ವಿರೋಧಿಸಿ ಸೆಸ್ಕ್ ಸಿಬ್ಬಂದಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಘೋಷಣೆ ಕೂಗಿದರು. ಸೆಸ್ಕ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಚಿದಂಬರಂ ಮಾತನಾಡಿ, ಟಾಟಾ ಪವರ್ ಕಂಪನಿ ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ಪ್ರಾರಂಭಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿರುವುದು ಆಕ್ಷೇಪಾರ್ಹವಾಗಿದೆ. ಇದು ನಿಗಮದ ನೌಕರರು ಮತ್ತು ಗ್ರಾಹಕರಿಗೆ ಆತಂಕದ ಸಂಗತಿಯೂ ಆಗಿದೆ. ಖಾಸಗಿ ಕಂಪನಿಗಳ ಪ್ರವೇಶದಿಂದ ನೌಕರರ ಸೇವಾ ಭದ್ರತೆಗೆ ಧಕ್ಕೆಯಾಗಲಿದೆ. ಅಪಾರ ವರ್ಷಗಳಿಂದ ಜನರ. ತೆರಿಗೆ ಹಣ ಹಾಗೂ ನೌಕರರ ಶ್ರಮದಿಂದ ಕಟ್ಟಿದ ನಿಗಮದ ಆಸ್ತಿಯನ್ನು ಖಾಸಗಿಯವರು ಲಾಭ ಮಾಡಿಕೊಳ್ಳಲು ವಹಿಸುವುದು ಸರಿಯಲ್ಲ. ಇವರು ಕೈಗಾರಿಕೆಗಳು, ವಾಣಿಜ್ಯ ಬಳಕೆ ಇನ್ನಿತರೆ ಆದಾಯ ಮೂಲದ ಕಡೆ ಗಮನ ಹರಿಸುವುದರಿಂದ ಸಾಮಾನ್ಯರಿಗೆ ರೈತರಿಗೆ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡುವುದು ಮರೀಚಿಕೆಯಾಗಲಿದೆ. ಹೀಗಾಗಿ ಖಾಸಗಿ ಕಂಪನಿಗೆ ವಹಿಸುವ ತೀರ್ಮಾನ ಕೈ ಬಿಟ್ಟು ಹಿತ ಕಾಯಬೇಕು ಎಂದು ಆಗ್ರಹಿಸಿದರು.

ಸೆಸ್ಕ ಸಹಾಯಕ ಇಂಜಿನಿಯರ್ ಖುಷ್ವಂತ್, ಗಿರೀಶ್, ವಿನುತ, ರಘುನಾಥ್, ನೌಕರರ ಸಂಘದ ಕುಮಾರ್, ಮಂಜುನಾಥ್, ಪ್ರದೀಪ್, ನಾಗೇಶ್, ಮಧು, ಧರಣೇಶ್, ತ್ರಿಮೂರ್ತಿ, ಸಂಘದ ಪದಾಧಿಕಾರಿಗಳು, ನೌಕರ ವರ್ಗದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಉತ್ತಮ ನಾಯಕನು ಉತ್ತಮ ಕೇಳುಗನಾಗಿರಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನಾಯಕತ್ವವು ಯಾವುದೇ ತಂಡ, ಸಂಸ್ಥೆ ಅಥವಾ ಸಮಾಜದ ಯಶಸ್ಸಿಗೆ ಅತ್ಯಂತ ಮುಖ್ಯವಾಗಿದೆ. ಒಬ್ಬ ನಾಯಕನು ಕೇವಲ ಆದೇಶಗಳನ್ನು ನೀಡುವ ವ್ಯಕ್ತಿಯಾಗಿರಬಾರದು. ಬದಲಾಗಿ, ಇತರರ ಅಭಿಪ್ರಾಯಗಳು ಮತ್ತು ಸಮಸ್ಯೆಗಳನ್ನು ಗಮನದಿಂದ ಕೇಳುವ ಗುಣವನ್ನು ಹೊಂದಿರಬೇಕು. ಆದ್ದರಿಂದ ಉತ್ತಮ ನಾಯಕನು ಉತ್ತಮ ಕೇಳುಗನಾಗಿರಬೇಕು. ಒಬ್ಬ ನಾಯಕನು ತನ್ನ ಸಹೋದ್ಯೋಗಿಗಳು ಅಥವಾ ತಂಡದ ಸದಸ್ಯರ ಮಾತುಗಳನ್ನು ಕೇಳಿದಾಗ ಅವರಲ್ಲಿ ವಿಶ್ವಾಸ ಮತ್ತು ಗೌರವ ಹೆಚ್ಚುತ್ತದೆ. ಇದರಿಂದ ತಂಡದ ಸದಸ್ಯರು ತಮ್ಮ ಆಲೋಚನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಧೈರ್ಯ ಪಡೆಯುತ್ತಾರೆ. ನಾಯಕನು ಎಲ್ಲರ ಅಭಿಪ್ರಾಯಗಳನ್ನು ಕೇಳಿ ನಿರ್ಧಾರ ತೆಗೆದುಕೊಂಡರೆ ಉತ್ತಮ ಫಲಿತಾಂಶಗಳನ್ನು ಪಡೆಯಬಹುದು. ಉತ್ತಮ ನಾಯಕತ್ವದ ಉದಾಹರಣೆಯಾಗಿ ಮಹಾತ್ಮ ಗಾಂಧೀಜಿಯನ್ನು ಹೇಳಬಹುದು. ಅವರು ಸಾಮಾನ್ಯ ಜನರ ಸಮಸ್ಯೆಗಳನ್ನು ಆಲಿಸಿ, ಅವರ ಅಗತ್ಯಗಳನ್ನು ಅರ್ಥಮಾಡಿಕೊಂಡು ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿದರು. ಅದೇ ರೀತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ವಿದ್ಯಾರ್ಥಿಗಳು ಮತ್ತು ಸಹೋದ್ಯೋಗಿಗಳ ಮಾತುಗಳಿಗೆ ಮಹತ್ವ ನೀಡುತ್ತಿದ್ದರು. ಈ ಗುಣವೇ ಅವರನ್ನು ಜನಪ್ರಿಯ ನಾಯಕರನ್ನಾಗಿ ಮಾಡಿತು.

ಒಬ್ಬ ನಾಯಕನು ಇತರರ ಮಾತುಗಳನ್ನು ಕೇಳದೆ ತನ್ನ ಅಭಿಪ್ರಾಯವನ್ನೇ ಹೇರಿದರೆ, ತಂಡದಲ್ಲಿ ಅಸಮಾಧಾನ ಉಂಟಾಗಬಹುದು.ಆದರೆ ಎಲ್ಲರ ಮಾತುಗಳನ್ನು ಗಮನದಿಂದ ಕೇಳುವ ನಾಯಕನು ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು ಮತ್ತು ತಂಡದ ಯಶಸ್ಸಿ ಗೆ ಕಾರಣನಾಗಬಹುದು.



ನಾಯಕತ್ವದ ಪ್ರಮುಖ ಗುಣಗಳಲ್ಲಿ ಕೇಳುವ ಗುಣವೂ ಒಂದಾಗಿದೆ. ಒಬ್ಬ ಉತ್ತಮ ನಾಯಕನು ಎಲ್ಲರ ಮಾತುಗಳನ್ನು ಗೌರವದಿಂದ ಕೇಳಬೇಕು. ಇಂತಹ ನಾಯಕನು ಜನರ ವಿಶ್ವಾಸವನ್ನು ಗಳಿಸಿ, ಅವರನ್ನು ಯಶಸ್ಸಿನತ್ತ ಮುನ್ನಡೆಸಲು ಸಾಧ್ಯವಾಗುತ್ತದೆ.

**-ಅಂತೋಣಿ ಮುತ್ತು ವಿ,
ಶಿಕ್ಷಕರು 7259675543**

# ಆಲೂರಿನ 5165 ಮಕ್ಕಳಿಗೆ ಪಲ್ಸ್ ಹನಿ ಹಾಕಲು ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲ್ಲೂಕಿನಲ್ಲಿ 5165 ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕುವ ಗುರಿ ಹೊಂದಲಾಗಿದೆ ಎಂದು ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿ ಡಾ. ನಿಸಾರ್ ಫಾತಿಮಾ ತಿಳಿಸಿದರು.

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ಜೂ. 28ರಂದು ನಡೆಯಲಿರುವ ಪಲ್ಸ್ ಪೋಲಿಯೋ ಲಸಿಕೆ ನೀಡುವ ಕಾರ್ಯಕ್ರಮದ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿ, ತಾಲ್ಲೂಕಿನಲ್ಲಿ 274 ವಲಸೆಗಾರರ ಮಕ್ಕಳು ಇವೆ. ಕಾರ್ಯಕ್ರಮ ಯಶಸ್ಸುಗೊಳಿಸಲು 98 ಅಂಗನವಾಡಿ ಕಾರ್ಯಕರ್ತೆಯರು, 71 ಆಶಾ ಕಾರ್ಯಕರ್ತೆಯರು, 13 ಇಲಾಖೆ ಸಿಬ್ಬಂದಿ, ಇಬ್ಬರು ಸ್ವಯಂ ಸೇವಕರು, 184 ವ್ಯಾಕ್ಸಿನೇಟರ್‌ಗಳು, 9 ಮೇಲ್ವಿಚಾರಕರ ನಿಯೋಜಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕೆ. ಹೊಸಕೋಟೆ, ಅಬ್ಬನ ಹಾಗೂ ರಾಯರಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿನ ಅಪಾಯಕಾರಿ ಪ್ರದೇಶಗಳನ್ನು ಗುರುತಿಸಿ 61 ಮಕ್ಕಳಿಗೆ ಸ್ಥಳದಲ್ಲಿ ಲಸಿಕೆ ನೀಡಲಾಗುವುದು ಎಂದರು.



ರೋಟರಿ ಸಂಸ್ಥೆಯಿಂದ ಮೂರು ದಿನಗಳ ಕಾಲ ಒಂದು ವಾಹನ ಒದಗಿಸಲು, ಲಸಿಕೆ ಹಾಕುವ ಸಿಬ್ಬಂದಿಗೆ ತಾಲ್ಲೂಕು ಪಂಚಾಯಿತಿ, ಸ್ಥಳೀಯ ಪಂಚಾಯಿತಿ ವತಿಯಿಂದ ಊಟ, ತಿಂಡಿ ವ್ಯವಸ್ಥೆ ಮಾಡಲು ಮತ್ತು ಜೂ. 25 ರಿಂದ ಏಳು ದಿವಸ ನಿರಂತರವಾಗಿ ವಿದ್ಯುತ್ ಅಡಚಣೆಯಾಗದಂತೆ ಸೆಸ್ಕ್ ಸಹಕರಿಸಬೇಕು ಎಂದು ಕೋರಲಾಯಿತು.

ಅತಿಸಾರ ಬೇದಿ ನಿಯಂತ್ರಣ ಕಾರ್ಯಕ್ರಮವು ಜೂ. 16 ರಿಂದ ಜು. 31 ರವರೆಗೆ ನಡೆಯಲಿದೆ. ಅಗತ್ಯವಿರುವ ಓ.ಆರ್.ಎಸ್. ಮತ್ತು ಜಿಂಕ್ ಮಾತ್ರೆಗಳ ದಾಸ್ತಾನ ಮಾಡಲಾಗಿದೆ. ಆರ್.ಬಿ.ಎಸ್.ಕೆ. ಕಾರ್ಯಕ್ರಮದಲ್ಲಿ ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ ಶಾಲಾ ಮಕ್ಕಳಿಗೆ ತಪಾಸಣೆ ಮಾಡಲಾಗುತ್ತದೆ. ತೀವ್ರ ಅಪೌಷ್ಟಿಕ ಮಕ್ಕಳನ್ನು ಗುರುತಿಸಿ ವೈದ್ಯಕೀಯ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಜ. 2026 ರಿಂದ ಈ ವರೆಗೆ 3 ಡೆಂಗ್ಯೂ ಪ್ರಕರಣ ವರದಿಯಾಗಿದ್ದು ನಿಯಂತ್ರಣದಲ್ಲಿದೆ. 27 ಕ್ಷಯ ರೋಗ ಪ್ರಕರಣಗಳಿಗೆ ಚಿಕಿತ್ಸೆ ನಡೆಯುತ್ತಿದೆ. 14 ವರ್ಷ ತುಂಬಿದ ಎಲ್ಲ ಹೆಣ್ಣು ಮಕ್ಕಳಿಗೆ ಗರ್ಭಕೊರಳು ಕ್ಯಾನ್ಸರ್ ವಿರುದ್ಧ ಹೆಚ್.ಪಿ.ವಿ. ಲಸಿಕೆ ಗುರಿ ಶೇ. 100 ರಷ್ಟು ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ.

ಏಪ್ರಿಲ್ ತಿಂಗಳಿನಿಂದ 9 ಕಾಂಪೋನೆಂಟ್ ಪ್ರೋತ್ಸಾಹಧನವನ್ನು ನಿಲ್ಲಿಸಲಾಗಿದೆ ಎಂದು ಆಶಾ ಕಾರ್ಯಕರ್ತೆಯರು ಸಭೆಯಲ್ಲಿ ತಿಳಿಸಿದರು.

ತಹಸೀಲ್ದಾರ್ ಮಲ್ಲಿಕಾರ್ಜುನ ಮಾತನಾಡಿ, ಪಲ್ಸ್ ಪೋಲಿಯೋ ಯಶಸ್ಸಿಗೆ ಪ್ರತಿಯೊಂದು ಇಲಾಖೆ ಸಿಬ್ಬಂದಿ, ಸೆಸ್ಕ್ ಇಲಾಖೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ಸಹಕರಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಡಾ. ಶಾಮಲ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಸುಬ್ರಹ್ಮಣ್ಯ, ಆರೋಗ್ಯ ಇಲಾಖೆ ಸಿಬ್ಬಂದಿ ಸತೀಶ್, ಮೋಹನ್, ಆಶಾ ಮೇಲ್ವಿಚಾರಕಿ ಶ್ವೇತಾ, ಲಯನ್ಸ್ ಸಂಸ್ಥೆ ಅಧ್ಯಕ್ಷ ಬಿ. ಮಂಜೇಗೌಡ ಉಪಸ್ಥಿತರಿದ್ದರು.

# ವಿದ್ಯುತ್ ತಗುಲಿ ವ್ಯಕ್ತಿ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಕಬ್ಬಿಣದ ರಾಡ್ ವಾಹನಕ್ಕೆ ತಗುಲಿ ವಿದ್ಯುತ್ ಪ್ರವಹಿಸಿದ ಪರಿಣಾಮ ಗೂಡ್ಸ್ ವಾಹನ ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸಮೀಪದ ಮಹಮ್ಮದ್‌ಪುರ ಗ್ರಾಮದಲ್ಲಿ ನಡೆದಿದೆ.

ಹಳೇಬೀಡು ಹೋಬಳಿ ಮಹಮ್ಮದ್ ಪುರ ಗ್ರಾಮದ ಗಂಗಯ್ಯ ಮೃತರು. ತಮ್ಮ ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನದಲ್ಲಿ ಕಬ್ಬಿಣದ ರಾಡ್ ತುಂಬಿಕೊಂಡು ಗ್ರಾಮದ ಮಹಮ್ಮದ್ ಖಾಸಿಂ ಅವರ ಮನೆ ಆವರಣದಲ್ಲಿ ವಾಹನ ತಿರುಗಿಸುವಾಗ ರಾಡ್ ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಅಳವಡಿಸಿದ್ದ ತಂತಿಗೆ ತಗುಲಿದೆ. ಪರಿಣಾಮ ವಿದ್ಯುತ್ ಸ್ಪರ್ಶಿಸಿ ಗಂಗಯ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕನ್ನಡ ಉಳಿವಿಗೆ ಪ್ರತಿಯೊಬ್ಬರ ಕೊಡುಗೆ ಅವಶ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನೆಲ, ಜಲ ಹಾಗು ಭಾಷೆಗೆ ಸಮಸ್ಯೆ ಎದುರಾದಾಗ ಎಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕು. ಕನ್ನಡಕ್ಕಾಗಿ ಪ್ರತಿಯೊಬ್ಬರು ಕೈ ಎತ್ತಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಕರಡೇವು ಮಧು ಹೇಳಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರವೇ ತಾಲ್ಲೂಕು ಘಟಕದ ವತಿಯಿಂದ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಅವರ 60ನೇ ಜನ್ಮದಿನದ ಅಂಗವಾಗಿ ರೋಗಿಗಳಿಗೆ ಹಾಲು, ಬ್ರೆಡ್ ಹಾಗು ಹಣ್ಣು-ಹಂಪಲು ವಿತರಿಸಿ ಮಾತನಾಡಿದ ಅವರು, ಕನ್ನಡ ಕೇವಲ ಭಾಷೆಯಲ್ಲ ನಾಡಿನ ಸಂಸ್ಕೃತಿ ಎಂದರು.



ನಾಡಿನ ಮಣ್ಣು ಹಾಗು ಭಾಷೆಗೆ ತೊಂದರೆಯಾದರೆ ಪರಿಹಾರ ಸಿಗುವ ವರೆಗೆ ಹೋರಾಟ ನಿಲ್ಲಬಾರದು ಎಂಬುದೇ ನಮ್ಮ ಉದ್ದೇಶವಾಗಿದೆ. ಅದಕ್ಕೆ ಪೂರಕವಾಗಿ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಕೆಲಸ ಮಾಡುತ್ತಿದ್ದಾರೆ.

ಕನ್ನಡ ಭಾಷೆಗೆ ತನ್ನದೇಯಾದ ಐತಿಹಾಸಿಕ ಹಿನ್ನೆಲೆ ಇದೆ. ಭಾಷೆಯನ್ನು ಉಳಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ವ೦೨ ಡಿಪಾಗಿಡ'ಬೇಕು. ಬಹುತೇಕರು ಅನ್ಯ ಭಾಷೆಗಳಿಗೆ ಮಾರು ಹೋಗುತ್ತಿರುವುದು ಅಪಾಯಕಾರಿ ಸಂಗತಿ ಎಂದು ಆತಂಕ ವ್ಯಕ್ತಪಡಿಸಿದರು.

ವ್ಯಾಪಾರ ಹಾಗೂ ವ್ಯವಹಾರದ ದೃಷ್ಟಿಯಿಂದ ಅನ್ಯ ಭಾಷೆಗಳು ಕೇವಲ ಬಳಕೆಯಲ್ಲಿರಲಿ. ಮಾತೃಭಾಷೆ ಕನ್ನಡ ಸದಾಕಾಲ ನಮ್ಮೆಲ್ಲರ ನಾಲಿಗೆಯ ಮೇಲೆ ನಲಿದಾಡುತ್ತಿರಲಿ.

ನಮ್ಮ ಭಾಷೆಯನ್ನು ಮರೆತರೆ ಹೆತ್ತ ತಾಯಿಗೆ ದ್ರೋಹ ಮಾಡಿದಂತಾಗುತ್ತದೆ ಎಂದರು.

ಬೆಂಗಳೂರು, ಮಂಗಳೂರು, ಮೈಸೂರು ಸೇರಿ ಉತ್ತರ ಕರ್ನಾಟಕದ ಬಹುತೇಕ ಪಟ್ಟಣ ನಗರಗಳಲ್ಲಿ ಯುವ ಸಮುದಾಯವು ಅನ್ಯ ಭಾಷೆಗಳ ಬಳಕೆಯಲ್ಲಿ ಮುಳುಗಿರುವುದು ಅಪಾಯಕಾರಿ ಬೆಳವಣಿಗೆ ಎಂದರು.

ದಂಡಿಗನಹಳ್ಳಿ ಹೋಬಳಿ ಘಟಕದಿಂದ ಉದಯಪುರ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ 60 ಗಿಡಗಳನ್ನು ನೆಟ್ಟು ನೀರುಣಿಸಲಾಯಿತು. ಬಳಿಕ ಅನ್ನದಾನ ನೆರವೇರಿಸಲಾಯಿತು .

ಕಾರ್ಮಿಕ ಘಟಕದ ಅಧ್ಯಕ್ಷ ಗಣೇಶ್ ಗೌಡ, ಜಿಲ್ಲಾ ಉಪಾಧ್ಯಕ್ಷ ಸತೀಶ್ ಕರಡೆವು, ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಬಿ.ಪಿ.ಧರ್ಮರಾಜ್, ಯುವ ಘಟಕ ತಾಲ್ಲೂಕು ಅಧ್ಯಕ್ಷ ಹರೀಶ್, ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ದ್ರಾಕ್ಷಾಯಿಣಿ ಮತ್ತಿತರರಿದ್ದರು.

# ಮರದ ದಿಮ್ಮಿ ಸಾಗಿಸುತ್ತಿದ್ದ ವಾಹನ ವಶ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅಕ್ರಮವಾಗಿ ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ವಾಹನವನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಉಪವಲಯ ಅರಣ್ಯಾಧಿಕಾರಿಗಳಾದ ಅರ್ಜುನ್, ಮಂಜುನಾಥ್, ಕುಮಾರ್ ಹಾಗೂ ಉಮೇಶ್ ನೇತೃತ್ವದ ತಂಡ ತಾಲ್ಲೂಕಿನ ಬೈಕೆರೆ ಗ್ರಾಮ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿತು.

ಈ ವೇಳೆ ಕಂಟೇನರ್ ಮಾದರಿಯ ವಾಹನದಲ್ಲಿ ಪರವಾನಗಿ ಪಡೆಯದೆ ಮರದ ದಿಮ್ಮಿಗಳನ್ನು ಸಾಗಿಸುತ್ತಿರುವುದು ಪತ್ತೆಯಾಯಿತು. ತಕ್ಷಣ ವಾಹನ ಹಾಗೂ ಮರವನ್ನು ವಶಪಡಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗಿದೆ. ವಾಹನದ ದಾಖಲೆಗಳ ಪರಿಶೀಲನೆ ವೇಳೆ, ಇದೇ ವಾಹನ ಈ ಹಿಂದೆಯೂ ಅರಣ್ಯ ಕಾಯ್ದೆ ಉಲ್ಲಂಘನೆ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಅರಣ್ಯ ಸಂಪತ್ತಿನ ಅಕ್ರಮ ಸಾಗಾಟ ಮತ್ತು ಕಳ್ಳತನ ತಡೆಗೆ ಇಲಾಖೆ ನಿರಂತರವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದು, ಅರಣ್ಯ ಕಾನೂನು ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಮುಂದುವರಿಯಲಿದೆ ಎಂದು ಆರ್‌ಎಫ್‌ಒ ಹೇಮಂತ್ ಕುಮಾರ್ ತಿಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಜೂನ್-13

1886: ಕೆನಡಾದ ವ್ಯಾಂಕೂವರ್ ನಗರದಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ನಗರದ ಬಹುಭಾಗ ನಾಶವಾಯಿತು.

1966: ಅಮೆರಿಕದ ಸುಪ್ರೀಂ ಕೋರ್ಟ್‌ನ ಐತಿಹಾಸಿಕ ಮಿರಾಂಡಾ ವಿರುದ್ಧ ಅರಿಜೋನಾ ತೀರ್ಪು ಪ್ರಕಟವಾಯಿತು. ಈ ತೀರ್ಪು ಬಂಧಿತ ವ್ಯಕ್ತಿಗಳ ಹಕ್ಕುಗಳ ರಕ್ಷಣೆಯಲ್ಲಿ ಮಹತ್ವದ ಮೈಲಿಗಲ್ಲಾಯಿತು.

1983: ಸ್ಯಾಲಿ ರೈಡ್ ಬಾಹ್ಯಾಕಾಶಕ್ಕೆ ತೆರಳಿದ ಮೊದಲ ಅಮೆರಿಕನ್ ಮಹಿಳೆಯಾದರು.

2000: ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾದ ರಾಷ್ಟ್ರ ನಾಯಕರು ಮೊದಲ ಬಾರಿಗೆ ಶೃಂಗಸಭೆ ನಡೆಸಿ ಐತಿಹಾಸಿಕ ಮಾತುಕತೆ ನಡೆಸಿದರು.

### ಜನನ

1865: ವಿಲಿಯಂ ಬಟ್ಲರ್ ಯೇಟ್ಸ್, ನೊಬೆಲ್ ಪ್ರಶಸ್ತಿ ವಿಜೇತ ಐರಿಷ್ ಕವಿ

1944: ಬಾನ್ ಕಿ-ಮೂನ್, ವಿಶ್ವಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ

### ನಿಧನ

ಕ್ರಿ.ಪೂ. 323: ವಿಶ್ವವಿಜೇತ ಅಲೆಕ್ಸಾಂಡರ್ ಮಹಾರಾಜ ಬಾಬಿಲೋನ್

# ಎಸ್.ಎಂ. ಕೃಷ್ಣ ಬಡಾವಣೆಗೆ ಸವಲತ್ತು ಕಲ್ಪಿಸಲು ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎಸ್.ಎಂ. ಕೃಷ್ಣ ನಗರದಲ್ಲಿ ಒಂದೆಡೆ ಮೂಲಭೂತ ಸೌಕರ್ಯಗಳ ಕೊರತೆ, ಮತ್ತೊಂದೆಡೆ ಚಿರತೆ ಮೊದಲಾದ ಕಾಡುಪ್ರಾಣಿಗಳ ಭೀತಿ ಹೆಚ್ಚಾಗಿದ್ದು ಸಾರ್ವಜನಿಕರಲ್ಲಿ ಆತಂಕ ಹೆಚ್ಚಿದೆ ಎಂದು ನಿವಾಸಿ ಬಿ.ಆರ್.ಬೊಮ್ಮೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಬಡಾವಣೆಯಲ್ಲಿ ಹಲವು ಖಾಲಿ ನಿವೇಶನಗಳಲ್ಲಿ ಲಂಟಾನ ಸೇರಿದಂತೆ ಕಾಡು ಗಿಡಗಳು ದಟ್ಟವಾಗಿ ಬೆಳೆದಿವೆ. ಇದರಿಂದ ವಿಷಕಾರಿ ಹಾವು, ಚೇಳು ಹಾಗೂ ಇತರ ಕಾಡು ಪ್ರಾಣಿಗಳಿಗೆ ಆಶ್ರಯ ತಾಣವಾಗಿ ಮಾರ್ಪಟ್ಟಿವೆ. ನಿವೇಶನ ಕಾಣದ ರೀತಿಯಲ್ಲಿ ಗಿಡಗಂಟೆ ಬೆಳೆದು ನಿಂತಿವೆ. ನಿವೇಶನ ಮಾಲೀಕರು ಜಾಗಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸದಿರುವುದರಿಂದ ಸಾರ್ವಜನಿಕ ಸುರಕ್ಷತೆಗೆ ಕುತ್ತು ಬಂದಿದೆ, ಇನ್ನಾದರೂ ನಿವಾಸಿಗಳು ತಮ್ಮ ತಮ್ಮ ಖಾಲಿ ನಿವೇಶನ ಸ್ವಚ್ಛ ಮಾಡಿಕೊಳ್ಳಬೇಕು ಎಂದು ವಿನಂತಿಸಿದರು.

ನೀರು-ವಿದ್ಯುತ್ ವ್ಯತ್ಯಯ, ಚರಂಡಿ ತುಂಬಿ ರಸ್ತೆ ಮೇಲೆಯೇ ಕೊಳಚೆ ಹಾಗೂ ಮಳೆ ನೀರು ಹರಿಯುವ ಸ್ಥಿತಿ ನಿರ್ಮಾಣವಾಗಿದೆ. ಪೈಪ್ ಲೈನ್ ಹಾಗೂ ಭೂಗತ ವಿದ್ಯುತ್ ಕೇಬಲ್‌ಗಳು ಹಾನಿಗೊಂಡ ಪರಿಣಾಮ ಕುಡಿಯುವ ನೀರು ಮತ್ತು ವಿದ್ಯುತ್ ಸರಬರಾಜಿನಲ್ಲಿ ನಿರಂತರ ವ್ಯತ್ಯಯ ಉಂಟಾಗುತ್ತಿದೆ ಎಂದರು.

# ವ್ಯಕ್ತಿಗೆ 9.95 ಲಕ್ಷ ರೂ. ಪಂಗನಾಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಪರಿಚಿತ ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ಪರಿಣಾಮ ವ್ಯಕ್ತಿಯೊಬ್ಬರಿಗೆ 9.95 ಲಕ್ಷ ರೂ. ಪಂಗನಾಮ ಹಾಕಲಾಗಿದೆ.

ಶಾಂತಿನಗರದ ಲಕ್ಷ್ಮಿಪತಿ ಹಣ ಕಳೆದುಕೊಂಡವರು. ಅವರು ಕೆನರಾ ಬ್ಯಾಂಕ್ ಎಂಸಿಇ ಕಾಲೇಜು ಶಾಖೆಯಲ್ಲಿ ಉಳಿತಾಯ ಖಾತೆ ಹೊಂದಿದ್ದಾರೆ. ಜೂನ್ 1ರ ಸಂಜೆ 6 ಗಂಟೆ ಸಮಯದಲ್ಲಿ ವಾಟ್ಸ್ ಆ್ಯಪ್ ಗ್ರುಪ್‌ಗೆ ಪೇಮೆಂಟ್ ಸೆಕ್ಯೂರ್ ಆ್ಯಪ್ ಬಂದಿದ್ದು ಅದರ ಪೂರ್ವಾಪರ ತಿಳಿಯದೆ ಲಕ್ಷ್ಮಿಪತಿ ಡೌನ್‌ಲೋಡ್ ಮಾಡಿದ್ದಾರೆ. ಆ ತಕ್ಷಣವೇ ಅವರ ಖಾತೆಯಿಂದ 5 ಲಕ್ಷ ರೂ. ಡ್ರಾ ಆಗಿದೆ. ಮತ್ತೆ ಕೆಲವೇ ನಿಮಿಷಗಳಲ್ಲಿ 4,95,301 ರೂ. ಕಡಿತವಾಗಿರುವ ಸಂದೇಶ ಬಂದಿದೆ. ಮಾರನೇ ದಿನ ಬ್ಯಾಂಕ್‌ನಲ್ಲಿ ಪರಿಶೀಲಿಸಿದಾಗ ಅಪರಿಚಿತ ಬ್ಯಾಂಕ್ ಖಾತೆಗೆ ಹಣ ವರ್ಗವಾಯಿರುವ ವಿಷಯ ತಿಳಿದಿದೆ. ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 50 ಗ್ರಾಂ ತೂಕದ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಡಹಗಲೇ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 50 ಗ್ರಾಂ ತೂಕದ ಚಿನ್ನಾಭರಣ, 80 ಗ್ರಾಂ ಬೆಳ್ಳಿ ಆಭರಣ ಹಾಗೂ 20 ಸಾವಿರ ರೂ. ನಗದು ಕದ್ದಿರುವ ಘಟನೆ ಗುಂಡೇಗೌಡನಕೊಪ್ಪಲಿನಲ್ಲಿ ಬುಧವಾರ ನಡೆದಿದೆ.

ಚಿತ್ರಲೇಖ ಎಂಬುವವರ ಮನೆಯಲ್ಲಿ ಕಳ್ಳತನವಾಗಿದೆ. ಬೆಳಿಗ್ಗೆ 11.20 ರಿಂದ ಸಂಜೆ 4ರ ಅವಧಿಯಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವುದು ಖಚಿತಪಡಿಸಿಕೊಂಡು ನುಗ್ಗಿರುವ ಕಳ್ಳರು ಬಲವಾದ ಆಯುಧದಿಂದ ಬಾಗಿಲ ಬೀಗ ಮುರಿದು ಪ್ರವೇಶಿಸಿದ್ದಾರೆ. ಬೀರುವಿನಲ್ಲಿಟ್ಟಿದ್ದ 10 ಗ್ರಾಂ ತೂಕದ ಚಿನ್ನದ ಮಣಿ ಚೈನ್, 5 ಗ್ರಾಂ ಚಿನ್ನದ ಮಣಿ ಚೈನ್,20 ಗ್ರಾಂ ಕ್ರಿಸ್ಟಲ್ ಮಣಿ ಚೈನ್, 5 ಗ್ರಾಂ ಚಿನ್ನದ ಓಲೆ, 3 ಗ್ರಾಂ ತೂಕದ ಚಿನ್ನ ಉಂಗುರ, 3 ಗ್ರಾಂ ತೂಕದ ಸಣ್ಣ ಒಡವೆ, 3 ಗ್ರಾಂನ ಚಿನ್ನದ ಓಲೆ, 50 ಗ್ರಾಂ ತೂಕದ ಬೆಳ್ಳಿ ಕಾಲು ಚೈನ್, 30 ಗ್ರಾಂ ತೂಕದ ಬೆಳ್ಳಿ ನೆಕ್ ಚೈನ್ ಕಳವು ಮಾಡಲಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248